# ಆಹಾ ಸುದ್ದಿ!

★ ಸಸಿತೋಟ

ಥಾಯ್ಲ್ಯಾಂಡ್‌ನಲ್ಲಿ ಜೈಲು ವಿಷಯವನ್ನು ಇಟ್ಟುಕೊಂಡು ಹಾಸ್ಟೆಲ್ ಶುರು ಮಾಡಿದ್ದಾರಂತೆ. ಉಡುಪು, ಊಟ, ಓಡಾಟ, ಕೆಲಸ ಎಲ್ಲವೂ ಜೈಲಿನಲ್ಲಿದ್ದಂತೆಯೇ. ಒಂದೇ ವ್ಯತ್ಯಾಸವೆಂದರೆ ನಿಜವಾದ ಜೈಲಿನಿಂದ ಜನ ಹೊರ ಬರಲು ಯತ್ನಿಸಿದರೆ, ಇಲ್ಲಿಗೆ ಜನ ಒಳ ಹೋಗಲು ಉತ್ಸಾಹ ತೋರುತ್ತಿದ್ದಾರಂತೆ.



ಇಂಗ್ಲೆಂಡ್‌ನ ಧಾರ್ಮಿಕ ಕೇಂದ್ರವೊಂದು ಪಕ್ಕದಲ್ಲಿರುವ ಪಬ್ ಖರೀದಿಸಿ ವಹಿವಾಟು ನಡೆಸಲು ಶುರು ಮಾಡಿದೆಯಂತೆ. ಜನರನ್ನು ಒಂದೆಡೆ ಸೇರಿಸಲು ಇದು ಅತ್ಯುತ್ತಮ ತಾಣ ಎನ್ನಲಾಗಿದ್ದು, ಲೌಕಿಕ ಚಟುವಟಿಕೆಗಳಿಗೆ ಪಬ್ ಆದರೆ, ಧಾರ್ಮಿಕ ಚಟುವಟಿಕೆಗಳಿಗೆ ಧಾರ್ಮಿಕ ಕೇಂದ್ರಕ್ಕೆ ಹೋಗಬಹುದಂತೆ.

ಈಜಿಪ್ಟ್‌ನ ಈ ಮಹಿಳೆಗೆ ಕೈಗಳೆಲ್ಲ ಸಶಕ್ತವಾಗಿದ್ದರೂ ಪಾದದಿಂದ ಬಟ್ಟೆಗೆ ಇಸ್ತ್ರಿ ಮಾಡುವ ಮೋಹವೇಕೋ. ಹಾಗೆಂದು ಪ್ರಶ್ನಿಸಿದರೆ ಹೊಟ್ಟೆಯ ಕಡೆ ಕೈ ಮಾಡುತ್ತಾಳಂತೆ. ಹೊಟ್ಟೆಯಿಂದಲೇ ಇಸ್ತ್ರಿ ಮಾಡುವವರನೇದಾರೂ ಸಿಕ್ಕರೆ ಅವರು ಇದೇ ಪ್ರಶ್ನೆಗೆ ಪಾದದ ಕಡೆ ಕೈ ತೋರಿಸಿ ಉತ್ತರವನ್ನು ನಿಮ್ಮ ಊಹೆಗೆ ಬಿಡಬಹುದು.





ಸ್ಪೇನ್ ಸಮೀಪದ ಇಬಿಜಾ ದ್ವೀಪದಲ್ಲಿ ಸ್ಥಳೀಯರು ಇಂತಹ ವ್ಯಾನಿನಲ್ಲಿ ವಾಸ ಮಾಡುವುದು ಮಾಮೂಲಂತೆ. ಇದು ಫ್ಯಾಷನ್‌ಗೋಸ್ಕರವಲ್ಲ, ದ್ವೀಪದ ತುಂಬ ಇರುವ ಕ್ಲಬ್, ಜೂಜಾಟದ ಕೇಂದ್ರಗಳು, ಮನರಂಜನಾ ತಾಣಗಳಿಂದಾಗಿ ಪ್ರವಾಸಿಗರಿಂದ ತುಂಬಿ ತುಳುಕುವುದರಿಂದ ಸ್ಥಳೀಯರಿಗೆ ವಾಸಿಸಲು ಮನೆಯಿಲ್ಲದೇ ಈ ರೀತಿ ಬದುಕುತ್ತಿದ್ದಾರಂತೆ.

ಮ್ಯುನಿಚ್‌ನಲ್ಲಿ ವಿಪರೀತ ಸಂಚಾರ ದಟ್ಟಣೆಯಂತೆ. ಪ್ರವಾಹದಂತೆ ಹರಿದು ಬರುವ ವಾಹನಗಳಿಂದ ತಪ್ಪಿಸಿಕೊಳ್ಳಲು ಅಲ್ಲಿಯ ಉದ್ಯೋಗಿ ಬೆಂಜಮಿನ್ ಸಮೀಪದ ಇಸಾರ್ ನದಿಯ ಪ್ರವಾಹದಲ್ಲೇ ಈಜಿ ತನ್ನ ಕಚೇರಿ ಸೇರುವ ಅಭ್ಯಾಸ ಮಾಡಿಕೊಂಡಿದ್ದಾನಂತೆ. ಲ್ಯಾಪ್‌ಟಾಪ್, ಉಡುಪನ್ನು ಜಲನಿರೋಧಕ ಚೀಲದಲ್ಲಿ ಬೆನ್ನಿಗೆ ಕಟ್ಟಿಕೊಂಡು 12 ನಿಮಿಷದಲ್ಲಿ ಈಜಿ ಗಮ್ಯ ಸ್ಥಾನ ಸೇರುತ್ತಾನಂತೆ. ಕಾರಿನ ಪೆಟ್ರೋಲ್ ಜೊತೆ ಮನೆಯಲ್ಲಿ ಸ್ನಾನ ಮಾಡುವ ಸಮಯವೂ ಉಳಿತಾಯವಾದಂತೆ.



ಚೀನಾದಲ್ಲಿ ಖಾರದ ಕೆಂಪು ಮೆಣಸಿನ ಕಾಯಿ ನೆನೆ ಹಾಕಿದ ನೀರಿನಲ್ಲಿ ಸ್ನಾನ ಮಾಡುತ್ತಲೇ ಆ ಮೆಣಸಿನ ಕಾಯಿಗಳನ್ನು ತಿನ್ನುವ ಸ್ಪರ್ಧೆ ನಿಧಾನಕ್ಕೆ ಅಕ್ಕಪಕ್ಕದ ರಾಷ್ಟ್ರಗಳಿಗೂ ಹಬ್ಬಿದೆಯಂತೆ. ನಿಮಿಷಕ್ಕೆ 15 ಮೆಣಸಿನ ಕಾಯಿಗಳನ್ನು ತಿಂದು ಪ್ರವಾಸಿಗರನ್ನು ಸೆಳೆಯಬೇಕಂತೆ. ಸೆಳೆಯುವುದು ಮೆಣಸಿನ ಖಾರಕ್ಕೋ, ಪ್ರವಾಸಿ ತಾಣಕ್ಕೋ!